# ಕಾಲ ಕಾಳೆದೆವಲ್ಲ ಜ್ಞಾನ ಬರಲಿಲ್ಲವಲ್ಲ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 187.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 151.
3. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
4. **Note:** Lyrics given here are as per Ref. 1. The wordings in Ref. 2 are same as in Ref. 1 with few differences which are not considered here.
5. **Note:** Singer has followed these wordings.

ರಾಗ: ಪುನ್ನಾಗವರಾಳಿ ತಾಳ: ಛಾಪು

ಕಾಲ ಕಾಳೆದೆನಲ್ಲ ಜ್ಞಾನ ಬರಲಿಲ್ಲವಲ್ಲಾ || ಪ ||
ಕಾಲನವರು ಕರೆಯ ಬಂದರೆ ಏನು ಹೇಳಲಿ ಸೊಲ್ಲಾ || ಅಪ ||

ಬಾಲನಾಗಿ ಜನಿಸಿ ತಾಯ ಮೊಲೆಗೆ ಭ್ರುಮಿಸಿ
ಹಾಲು ಬೆಣ್ಣೆ ಉಣಿಸಿ ಹಸುಕೂಸು ಎಂದೆನಿಸಿ || 1 ||

ಚೆಂಡು ಬುಗರಿಯಾಡಿ ಚೆಲುವ ವಸನ ಬೇಡಿ
ಹಿಂಡು ದುಷ್ಟರ ಕೂಡಿ ಕ್ರೂರ ಕೃತ್ಯ ಮಾಡಿ || 2 ||

ಪ್ರಾಯದಲಿ ಸಿಕ್ಕಿ ಮಾಯದಲಿ ಸೊಕ್ಕಿ
ಸ್ತ್ರೀಯರೊಡನೆ ಮಿಕ್ಕಿ ಹೇಯ ಬುದ್ಧಿಲಿ ಸಿಕ್ಕಿ || 3 ||

ಮಕ್ಕಳಾಧೀನದಿ ಸಿಕ್ಕಿದೆ ದೈನ್ಯದಿ
ಕಕ್ಕುಲತೆ ಬುದ್ಧಿ ಕೊಕ್ಕದಿಟ್ಟು ಮೋದದಿ || 4 ||

ರಾಮ ಪೂಜೆಯನ್ನು ಮಾಡಲಿಲ್ಲವು ಇನ್ನು
ಸ್ವಾಮಿ ಪುರಂದರ ವಿಠಲನ್ನ ಪ್ರೇಮಕ್ಕೆ ದೂರನು || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಒಬ್ಬಳ ಬಸುರಿಂದಲಿ ಬಂದೆ…** – ದೇವಕಿಯ ಮಗ, ಯಶೋದೆಯ ಸಾಕುಮಗ.

**ತಗಿಬಿಗಿಯಾಟ** – ದಿಗ್ಭ್ರಮೆಗೊಳಿಸುವ ಆಟ.

**ಮೃಡಸುರಪಾದ್ಯರು** – ಶಿವ, ಇಂದ್ರ ಮೊದಲಾದವರು.

**ಹೆಡೆಯ ಮೇಲೆ** – ಕಾಳಿಂದಿ ಮಡುವಿನಲ್ಲಿ ಕಾಳಿಂಗನ ಹೆಡೆಯ ಮೇಲೆ.

**ಒಂದು ಪಾದವ…** – ವಾಮನಾವತಾರದಲ್ಲಿ ತ್ರಿವಿಕ್ರಮ ರೂಪ.

**ಸರ್ಪಬಾಣ…** – ಮಹಾಭಾರತ ಯುದ್ಧದಲ್ಲಿ ಕರ್ಣನು ಪ್ರಯೋಗಿಸಿದ ಅಮೋಘವಾದ ಸರ್ಪಾಸ್ತ್ರದಿಂದ ಅರ್ಜುನನನ್ನು ಕಾಪಾಡಿದ ಪ್ರಸಂಗ.

**ದ್ರೋಣನ ಸಂಗ್ರಾಮದಿ** – ಮಹಾಭಾರತದ ದ್ರೋಣ ಪರ್ವದಲ್ಲಿ ಬರುವ ಪ್ರಸಂಗ. ಅಭಿಮನ್ಯುವನ್ನು ಕೊಂದ ಸೈಂಧವ ಜಯದ್ರಥನನ್ನು ಸಂಜೆಯೊಳಗೆ ಕೊಲ್ಲುವೆನೆಂದು ಪ್ರತಿಜ್ಞೆ ಮಾಡಿದ ಅರ್ಜುನನಿಂದ ಕೊಲ್ಲಿಸಲು ತನ್ನ ಚಕ್ರದಿಂದ ಸೂರ್ಯನನ್ನು ಮರೆಮಾಡಿ ಸಂಜೆಯಂತೆ ಕಾಣಿಸಿದ; ಹೆದರಿ ಅಡಗಿದ್ದ ಜಯದ್ರಥನು ಸಂಜೆಯಾಯಿತೆಂದು ಹೊರಗೆ ಬರಲು ಅರ್ಜುನನು ಅವನನ್ನು ಕೊಂದನು. ಜಯದ್ರಥನ ತಂದೆ ವೃದ್ಧಕ್ಷತ್ರನು ಸಾಯಂಸಂಧ್ಯೆಯಲ್ಲಿ ತೊಡಗಿದ್ದಾಗ, ಅರ್ಜುನನ ಬಾಣದಿಂದ ಕತ್ತರಿಸಲ್ಪಟ್ಟ ಜಯದ್ರಥನ ತಲೆಯು ವೃದ್ಧಕ್ಷತ್ರನ ಬೊಗಸೆಯಲ್ಲಿ ಬಿದ್ದಿತು. ಕಾತರನಾಗಿ ಅವನು ತಲೆಯನ್ನು ಭೂಮಿಯ ಮೇಲೆ ಬಿಸಾಡಲು ತಲೆಯೊಡೆದು ಸತ್ತನು.

**ಮಾಣು** = ನಿಲ್ಲಿಸು, ನಿವಾರಿಸು, ಬಿಡು

**ಅಳವಲ್ಲ** = ಸಾಧ್ಯವಲ್ಲ, ನಿಲುಕದ

**Classification:** Keerthane
**Ankita:** purandara vittala
**Location:** NA
**Category:** Jeevana Darshana,
**Sub-Category:** jnana, huttu, tayi, halu, benne, oota, maya, hennu, hengasu, buddi, makkalu, rama, puje, prema,
**Pravachana:** NA
**Explanation:** NA